ಬಂದಿಲ್ಲವಲ್ಲ? ಆ ಹುಡುಗ ನೆನಪಾದ. ಅವನ ನಿಖರ ನಡಿಗೆ, ಹೇಳಿದಾಕ್ಷಣವೇ ಸ್ವಲ್ಪ ಸಮಯದಲ್ಲಿ ಫಲಿತಾಂಶವನ್ನು ತೋರಿಸುವ ಗುಣ, ಅವನು ಹೇಳುವ ಸುಳ್ಳುಗಳು ಅವಳಿಗೆ ನೆನಪಾದವು. ಪಶ್ಚಿಮ ಘಟ್ಟದ ಕಾಡುಗಳ ಮಧ್ಯ ಗೆಸ್ಟ್ ಹೌಸಿನಲ್ಲಿ ಅಂದು ಇವಳಿಗೆ ನಿದ್ರೆಯೇ ಇಲ್ಲ. ಪಕ್ಕದ ರೂಮಿನಲ್ಲಿರುವ ಮಹಾದೇವ ಬಂದೇ ಬರುತ್ತಾನೆ. ಅಂಡು ಚಿವುಟಿದವನು, ಅಡುಗೆ ಮನೆಗೆ ಬರಲಾರನೆ? ಎಂದುಕೊಂಡು ಕಾದಳು. ನಿದ್ರೆಯ ಮರೆತಳು. ಅವನು ಬರಲಿಲ್ಲ. ಗೊರಕೆಯ ಧ್ವನಿ ಈ ರೂಮಿಗೂ ಕೇಳುತ್ತಲಿತ್ತು.

ಅವಳು ಕಾದದ್ದು ಅವನಿಗಾಗಿ, ಆದರೆ ಹೇಳಿಕೊಂಡಿದ್ದು ಹೀಗೆ– ನಿದ್ರೆ ಯಾಕೆ ಬರಲಿಲ್ಲ ಅಂದರೆ ಸುತ್ತಲೂ ನರಿತೋಳಗಳು ಬೊಗಳುತ್ತಿದ್ದವು, ನದಿ ತೊರೆಗಳು ರೊಂಯ್ ಎನ್ನುತ್ತಿದ್ದವು, ಶಿಕಾಡ ಜುಂಯ್ ಜುಂಯ್ ಎನ್ನುತ್ತಿದ್ದವು. ಮತ್ತೆ ನರರಾಕ್ಷಸನೊಬ್ಬ ಪಶ್ಚಿಮ ಘಟ್ಟದಲ್ಲಿ ಮನುಷ್ಯರನ್ನು ಬೇಟೆಯಾಡುತ್ತಾನಂತೆ, ಈ ಅಂಶಗಳು ನಿದ್ರೆ ಕಸಿದಿದ್ದವು.

ಅವನೇನು ಆ ರಾತ್ರಿ ಬರಲಿಲ್ಲ, ಅವನು ಒಳ್ಳೆಯವನೋ ಅಥವಾ ನಾನು ಕೆಟ್ಟವಳೋ? ಛಿ, ಆ ಹುಡುಗನನ್ನು ನಾನು ಹದ್ದು ಬಸ್ತಿನಲ್ಲಿಡಬೇಕು. ನನ್ನ ಹಿಂದೆ ಮುಟ್ಟಲು ಎಷ್ಟು ಧೈರ್ಯ ಅವನಿಗೆ! ಯಃಕಶ್ಚಿತ ನಾಲ್ಕನೇ ದರ್ಜೆಯ ಕ್ಷೇತ್ರ ಪರಿಪಾಲಕನಾದ ಅವನು ನನ್ನ ಜೊತೆ ಅಸಭ್ಯವಾಗಿ ವರ್ತಿಸುತ್ತಾನೆಂದರೆ ನಾಳೆ ಅವನಿಗೆ ಒಂದು 'ಮೆಮೋ' ಕೊಡಬೇಕು ಎಂದುಕೊಂಡಳು. ಏನೆಂದು ಕೊಡಬೇಕು ಎಂದು ಟೇಬಲ್ ಬಾಕ್ಸನ್ನು ತೆರೆದು ಮೆಮೊ ಸ್ಲಿಪ್ ತೆಗೆದು ಬರೆಯ ಹತ್ತಿದಳು.

ಅಸಭ್ಯವರ್ತನೆ. ಎಂದರೆ ಏನು ಬರೆಯಯುವುದು ಅಂಡು ಚಿವುಟಿದ ಎಂದು ಬರೆಯಲೇ. ಛಿ, ಇದು ಒಂದು ಅಸಭ್ಯ ದಾಖಲೆಯಾಗಿ ಆಫೀಸಿನ ಕಡತ ಸೇರುತ್ತದೆ. ನನಗೆ ಬಂದ ಸಾವಿರಾರು ಪ್ರಶಸ್ತಿಗಳು ಅಣಕಿಸುತ್ತವೆ. ನಿರ್ದೇಶಕ ಮಂಡಳಿಯವರು ಅನುಮಾನಿಸುತ್ತಾರೆ. ನಾನಿನ್ನು ತೆರೆದುಕೊಳ್ಳಲು ಪಕ್ವವಾಗಿಲ್ಲ ಎಂದು ಮಾತ್ರ ತೆಗೆದುಕೊಳ್ಳಲು ಅದೇ ಡೈನಿಂಗ್ ಟೇಬಲ್‌ನತ್ತ ಹೋದಳು.

